**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿ.ಸಿ. 346/2025**

| | | |
|---|---|---|
| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿತರುಃ** |
| ರಾಮಾಪುರ ಪೊಲೀಸ್ ಠಾಣೆ | | ಶಿವರಾಮನ್ ಮತ್ತು ಇತರರು |

**:: ದೋಷಾರೋಪಣೆ ::**

**ಶ್ರೀ. ಎಂ. ರಂಜಿತ್ ಕುಮಾರ್, ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೊಳ್ಳೇಗಾಲ, ಆದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀ. ಶಿವರಾಮನ್ ಬಿನ್ ಪರುಶುರಾಮ್ , 35 ವರ್ಷ,
2. ಶ್ರೀ. ಪರುಶುರಾಮ್ ಬಿನ್ ಲೇಟ್ ಆರ್. ವೆಂಕಟಾಚಲ, 50 ವರ್ಷ,
   **ಇಬ್ಬರ ವಾಸಃ** ನಾಗಣ್ಣನಗರದ ಬಳಿಯ ಜಮೀನು ಮನೆ ವಾಸ,
   ಪುದುರಾಮಾಪುರ ಗ್ರಾಮ, ಹನೂರು ತಾಲ್ಲೂಕು,
   ಚಾಮರಾಜನಗರ ಜಿಲ್ಲೆ.
3. ಶ್ರೀ. ಎಸ್ ವೆಂಕಟೇಶ್ ಬಿನ್ ಲೇಟ್ ಸಂಗೋಡಗೌಂಡರ್, 57 ವರ್ಷ,
   **ವಾಸಃ** ಜಮೀನು ಮನೆ ವಾಸ, ಪುದುರಾಮಾಪುರ ಗ್ರಾಮ,
   ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕ: 03-08-2024 ರಂದು ಬೆಳಿಗ್ಗೆ ಸುಮಾರು 09-30 ಗಂಟೆಯ ಸಮಯದಲ್ಲಿ ಹನೂರು ತಾಲ್ಲೂಕು, ರಾಮಾಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ನಾಗಣ್ಣ ನಗರ ಗ್ರಾಮದ ಬಳಿ ನಾಗಣ್ಣನಗರ – ಪುದುರಾಮಾಪುರ ಗ್ರಾಮಗಳ ನಡುವಿನ ಮುಖ್ಯ ರಸ್ತೆಯಲ್ಲಿ ಒಂದನೇ ಆರೋಪಿಯಾದ ನೀವು ನಿಮ್ಮ **KA-02-HY-8754** ನಂಬರಿನ ಬಜಾಜ್ ಪಲ್ಸರ್ 180 ಮೋಟಾರ್ ಬೈಕ್ ನಲ್ಲಿ ಪಳನಿಮೇಡು ಗ್ರಾಮದ ಕಡೆಯಿಂದ ನಾಗಣ್ಣನಗರ ಗ್ರಾಮದ ಕಡೆ ಹೋಗುವಾಗ ಎದುರುಗಡೆ ನಾಗಣ್ಣ ನಗರ ಗ್ರಾಮದ ಕಡೆಯಿಂದ ಪುದುರಾಮಾಪುರ ಗ್ರಾಮದ ಕಡೆ ಸಾಕ್ಷಿ-1 ರಿಂದ 4 ರವರುಗಳು ತಮ್ಮ **KA**-10-**ED**-0746 ನಂಬರಿನ ಹೀರೋ ಸ್ಪ್ಲೆಂಡರ್ ಪ್ಲಸ್ ಮೋಟಾರ್ ಬೈಕ್ ನಲ್ಲಿ ಮತ್ತು **TN**-24-**Q**-7705 ನಂಬರಿನ ಹೋಂಡ ಯೂನಿಕಾರ್ನ್ ಮೋಟಾರ್ ಬೈಕ್ ಗಳಲ್ಲಿ ಹೋಗುವಾಗ ಒವರ್ ಟೇಕ್ ಮಾಡಿದ ವಿಚಾರದಲ್ಲಿ ಒಂದನೇ

ಆರೋಪಿಯಾದ ನೀವು ಜಗಳ ತೆಗೆದು ಆವಾಚ್ಯ ಶಬ್ದಗಳಿಂದ ಬೈದು, ಸಾಕ್ಷಿ–1 ರಿಂದ 4 ರವರುಗಳನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಡೆದಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 126(2) ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ ಒಂದನೇ ಆರೋಪಿಯಾದ ನೀವು ಸ್ಥಳಕ್ಕೆ ನಿಮ್ಮ ತಂದೆ ಆರೋಪಿ–2 ಹಾಗೂ ನಿಮ್ಮ ಸಂಬಂಧಿ ಆರೋಪಿ–3 ರವರನ್ನು ಕರೆಯಿಸಿಕೊಂಡು ಸಾಕ್ಷಿ–1 ರಿಂದ 4 ರವರುಗಳ ಮೇಲೆ ಉದ್ದೇಶಪೂರ್ವಕವಾಗಿ ಗಲಾಟೆ ತೆಗೆದು ಬೋಳಿ ಮಕ್ಕಳೆ, ಸೂಳೆ ಮಕ್ಕಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 352 ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ ಒಂದನೇ ಮತ್ತು ಎರಡನೇ ಆರೋಪಿಗಳಾದ ನೀವುಗಳು ಸಾಕ್ಷಿ–1 ರಿಂದ 4 ರವರ ಮೇಲೆ ಕಲ್ಲುಗಳನ್ನು ಬೀಸಿರುತ್ತೀರಿ ಹಾಗೂ ನೀವೆಲ್ಲರೂ ಸೇರಿ ಸಾಕ್ಷಿ–1 ಮತ್ತು 2 ರವರಿಗೆ ಕೈಗಳಿಂದ ಹೊಡೆದು ನೋವುಂಟುಪಡಿಸಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 115(2) ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

24 ನೇ ಡಿಸೆಂಬರ್ ಮಾಹೆ 2025.

**( ಎಂ. ರಂಜಿತ್ ಕುಮಾರ್ )**
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿ.ಸಿ.ನಂ. 346/2025**

| | | |
|---|---|---|
| **ಫಿರ್ಯಾದುದಾರರು** | **ವಿರುದ್ಧ** | **ಆರೋಪಿ-1** |
| ರಾಮಾಪುರ ಪೊಲೀಸ್ ಠಾಣೆ | | ಶ್ರೀ. ಶಿವರಾಮನ್ |

**:: ಆರೋಪಿ ಹೇಳಿಕೆ ::**

**ಪ್ರಶ್ನೆ :1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?**

**ಉತ್ತರ :**

**ಪ್ರಶ್ನೆ :2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೇ?**

**ಉತ್ತರ :**

**(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ಹೇಳಿದ ನಂತರ ಆರೋಪಿ ಅದನ್ನು ಅರ್ಥ ಮಾಡಿಕೊಂಡ ನಂತರ ನೀಡಿದ ಉತ್ತರಗಳನ್ನು ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ)**

**ದಿನಾಂಕ: 24.12.2025**

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.**

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿ.ಸಿ.ನಂ. 346/2025**

| **ಫಿರ್ಯಾದುದಾರರು** | **ವಿರುದ್ಧ** | **ಆರೋಪಿ-2** |
|---|---|---|
| ರಾಮಾಪುರ ಪೊಲೀಸ್ ಠಾಣೆ | | ಶ್ರೀ. ಪರುಶುರಾಮ್ |

**:: <u>ಆರೋಪಿ ಹೇಳಿಕೆ</u> ::**

**ಪ್ರಶ್ನೆ :1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?**

**ಉತ್ತರ :**

**ಪ್ರಶ್ನೆ :2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೇ?**

**ಉತ್ತರ :**

**(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ಹೇಳಿದ ನಂತರ ಆರೋಪಿ ಅದನ್ನು ಅರ್ಥ ಮಾಡಿಕೊಂಡ ನಂತರ ನೀಡಿದ ಉತ್ತರಗಳನ್ನು ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ)**

ದಿನಾಂಕ: 24.12.2025

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದಂ.ನ್ಯಾಂ.ದಂ., ಕೊಳ್ಳೇಗಾಲ.

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿ.ಸಿ.ನಂ. 346/2025**

| | | |
|---|---|---|
| **ಫಿರ್ಯಾದುದಾರರು** | **ವಿರುದ್ಧ** | **ಆರೋಪಿ-3** |
| ರಾಮಾಪುರ ಪೊಲೀಸ್ ಠಾಣೆ | | ಶ್ರೀ. ಎಸ್ ವೆಂಕಟೇಶ್ |

**:: ಆರೋಪಿ ಹೇಳಿಕೆ ::**

**ಪ್ರಶ್ನೆ :1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?**

**ಉತ್ತರ :**

**ಪ್ರಶ್ನೆ :2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೇ?**

**ಉತ್ತರ :**

**(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ಹೇಳಿದ ನಂತರ ಆರೋಪಿ ಅದನ್ನು ಅರ್ಥ ಮಾಡಿಕೊಂಡ ನಂತರ ನೀಡಿದ ಉತ್ತರಗಳನ್ನು ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ)**

**ದಿನಾಂಕ: 24.12.2025**

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.**